

ತುರ್ತಾದಲ್ಲಿ ಕಂಡ ಕಲ್ಲುಗುಂಡಿನ ಮೇಲಿನ ಶಾಸನ

ಕಬ್ಬಿಣದ ಕ್ಲಾಂಪುಗಳಿಂದ ಹಾಸುಕಲ್ಲುಗಳನ್ನು ಬಿಗಿದು ಕಟ್ಟಲಾದ ಹೊಸೂರು ಅಣೆಕಟ್ಟು

# 600 ವರ್ಷಗಳ ಹಿಂದಿನ ಅಣೆಕಟ್ಟುಗಳ ಬೆನ್ನತ್ತಿ...

**ವಿಜಯನಗರ ಸಾಮ್ರಾಜ್ಯದ ಅಣೆಕಟ್ಟುಗಳು ತಮ್ಮ ವಿಶಿಷ್ಟ ರಚನೆಯಿಂದ ಗಮನಸೆಳೆಯುತ್ತವೆ. ಅವುಗಳನ್ನು ಮೂಲ ರೂಪದಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನಗಳು ನಡೆಯಬೇಕಾಗಿದೆ.**

■ ಮಲ್ಲಿಕಾರ್ಜುನ ಹೊಸಪಾಳ್ಯ

ವಿಜಯನಗರ ಸಾಮ್ರಾಜ್ಯದ ಆಳ್ವಿಕೆ ಹಾಗೂ ಅದಕ್ಕೂ ಮುಂಚೆ ನಿರ್ಮಿಸಲಾದ ನೀರಾವರಿ ಕಾಲುವೆ ಮತ್ತು ಅಣೆಕಟ್ಟುಗಳ ಬಗ್ಗೆ ಕಳೆದ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ, ಅಣೆಕಟ್ಟುಗಳನ್ನು ಹತ್ತಿರದಿಂದ ನೋಡಲು ಸಾಧ್ಯವಾಗಿರಲಿಲ್ಲ. ರಭಸದಿಂದ ಹರಿಯುವ ತುಂಗಭದ್ರಾ ನದಿಗೆ ಆ ಕಾಲದಲ್ಲಿ ಹೇಗೆ ತಡೆ ಹಾಕಿದರು, ನೀರಿನಲ್ಲಿ ಕೊಚ್ಚಿಹೋಗದಂತೆ ಎಂತಹ ಕಲ್ಲುಗಳನ್ನು ಬಳಸಿದ್ದರು, ಅವುಗಳನ್ನು ಹೇಗೆ ಜೋಡಿಸಿದ್ದರು ಎನ್ನುವ ಬಗ್ಗೆ ಕುತೂಹಲವಿತ್ತು. ಜೊತೆಗೆ ಕೆಲವು ಅಣೆಕಟ್ಟುಗಳ ಬಳಿಯ ಬಂಡೆಗಳ ಮೇಲೆ ಶಾಸನಗಳು ಇರುವುದರ ಬಗ್ಗೆ ಓದಿದ್ದು, ಅವುಗಳನ್ನು ನೋಡಲೇಬೇಕೆಂಬ ಹಂಬಲವಿತ್ತು.

ಕಳೆದ ಎರಡು ವರ್ಷಗಳಿಂದ ಈ ಅಣೆಕಟ್ಟುಗಳ ಬಳಿ ನೀರು ಸದಾ ಶೇಖರವಾಗಿ ಹತ್ತಿರ ಹೋಗಲು ಆಗುತ್ತಿರಲಿಲ್ಲ. ಈ ವರ್ಷ ಅವಕಾಶ ಒದಗಿ ಬಂತು. ಕರ್ನಾಟಕ ನೀರಾವರಿ ನಿಗಮವು ಈ ಅಣೆಕಟ್ಟುಗಳ ರಿಪೇರಿ ಕೈಗೆತ್ತಿಕೊಂಡಿತು. ಅದಕ್ಕಾಗಿ ನದಿಯ ಒಳಗೆ ಅಣೆಕಟ್ಟುಗಳ ಹತ್ತಿರ ಹೋಗಲು ತಾತ್ಕಾಲಿಕ ಮಣ್ಣಿನ ದಾರಿಗಳೂ ನಿರ್ಮಾಣವಾದವು. ರಿಪೇರಿಗೆ ಅನುಕೂಲವಾಗಲೆಂದು ನೀರಿನ ಹರಿವನ್ನು ನದಿಯ ಬೇರೆಡೆಗೆ ತಿರುಗಿಸಿದ ಪರಿಣಾಮ ನೂರಾರು ವರ್ಷಗಳಿಂದ ನೀರಿನೊಳಗೇ ಇದ್ದ ಆ ಕಾಲದ ರಚನೆಗಳು ಗೋಚರಿಸತೊಡಗಿದವು.

ಬೆಲ್ಲಾ ಕಾಲುವೆಗೆ ಕಟ್ಟಿರುವ ಹೊಸೂರು ಅಣೆಕಟ್ಟು ನದಿಯ ಒಳಗೆ ಸುಮಾರು ಒಂದು ಕಿಲೋಮೀಟರ್ ಉದ್ದವಿದೆ. 50–60 ವರ್ಷಗಳ ಹಿಂದೆ ಹೊಸ ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗಿದ್ದ ಹಳೆಯ ಕಟ್ಟಡ ಈಗ ಕಾಣಿಸತೊಡಗಿತು. ನಾಲ್ಕೈದು ಅಡಿ ಉದ್ದದ, ಸುಮಾರು ಒಂದು ಅಡಿ ದಪ್ಪನೆಯ ಕಲ್ಲಿನ ಕೂಚಗಳನ್ನು ಕಡೆದು ಜೋಡಿಸಿದ ರೀತಿ ಅಚ್ಚರಿ ತರುವಂಥದು. ನೀರಿನ ರಭಸ ತಡೆಯಲು ಕೆಲವನ್ನು ಅಡ್ಡಲಾಗಿ, ಕೆಲವನ್ನು ನೇರ ಕೂರಿಸಿ ಕಬ್ಬಿಣದ ಕ್ಲಾಂಪುಗಳಿಂದ ಬಿಗಿಯಲಾಗಿದೆ. ಕಬ್ಬಿಣದ ಸರಳುಗಳು ತುಕ್ಕು ಹಿಡಿದಿದ್ದರೂ ಸಂಪೂರ್ಣ ಹಾಳಾಗಿಲ್ಲ. ಹಳೆಯ ಅಣೆಕಟ್ಟು ಕೆಲವೆಡೆ ಕೊಚ್ಚಿಹೋಗಿದೆ. ಅದರ ಕುರುಹಾಗಿ ಅಲ್ಲಲ್ಲೇ ಅವಶೇಷಗಳು ಬಿದ್ದಿವೆ.

ಅಣೆಕಟ್ಟೆಗೆ ಹೊಂದಿಕೊಂಡಿರುವ ನಡುಗಡ್ಡೆಯಲ್ಲಿ ಹಲವು ಪ್ರಾಚೀನ ದೇವಾಲಯಗಳು, ಮಂಟಪಗಳನ್ನು ಕಾಣಬಹುದು. ಒಂದು ಮಸೀದಿಯೂ ಇದೆ. ಈಗ ಬಹುತೇಕ ಹಾಳುಬಿದ್ದಿವೆ. ಆ ಕಾಲಕ್ಕೆ ಇದೊಂದು ಜನವಸತಿ ಕೇಂದ್ರ.